13. ಮಂಡ್ಯ	22	15
14. ಕೊಡಗು	02	–
15. ಹಾಸನ	06	–
16. ಬೆಳಗಾವಿ	16	–
17. ಕಾರವಾರ (ಉ.ಕ.)	01	–
18. ಧಾರವಾಡ	03	–
19. ಹಾವೇರಿ	02	–
20. ಗದಗ	14	–
21. ಬಾಗಲಕೋಟೆ	06	–
22. ಬಿಜಾಪುರ	02	–
23. ಬೀದರ್	05	–
24. ಗುಲ್ಬರ್ಗಾ	07	–
25. ಕೊಪ್ಪಳ	13	–
26. ರಾಯಚೂರು	02	–
ಒಟ್ಟು	170	194

ಆಯುಷ್ ವೈದ್ಯರಿಗೆ ಗ್ರಾಮೀಣ ಸೇವಾ ಭತ್ಯೆ ನೀಡುವುದು

579 (422) **ಶ್ರೀ ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ)** ದಯೆಯಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸರ್ಕಾರದ ಆಲೋಪತಿ ವೈದ್ಯಾಧಿಕಾರಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಸೇವೆಯಲ್ಲಿದ್ದು ಕೇಂದ್ರ ಸ್ಥಾನದಲ್ಲಿ ವಾಸ ಮಾಡುತ್ತಿರುವುದಕ್ಕೆ ನೀಡುತ್ತಿರುವ ಗ್ರಾಮೀಣ ಭತ್ಯೆ ಎಷ್ಟು;

(ಆ) ಇದೇ ರೀತಿ ಗ್ರಾಮೀಣ ಪ್ರದೇಶದ ಕುಗ್ರಾಮಗಳಲ್ಲಿ (Removte Rural Areas) ಸೇವೆ ಸಲ್ಲಿಸುತ್ತಿದ್ದು ಕೇಂದ್ರ ಸ್ಥಾನದಲ್ಲಿ ವಾಸ ಮಾಡುತ್ತಿರುವ ಆಯುಷ್ ವೈದ್ಯಾಧಿಕಾರಿಗಳಿಗೆ ನೀಡುತ್ತಿರುವ ಗ್ರಾಮೀಣ ಭತ್ಯೆ ಎಷ್ಟು;

(ಇ) ಆಯುಷ್ ವೈದ್ಯಾಧಿಕಾರಿಗಳಿಗೆ ಗ್ರಾಮೀಣ ಭತ್ಯೆ ನೀಡದಿದ್ದಲ್ಲಿ, ಈ ರೀತಿ ತಾರತಮ್ಯ ನೀತಿ ಅನುಸರಿಸಲು ಕಾರಣಗಳೇನು;

(ಈ) ಆಯುಷ್ ವೈದ್ಯರುಗಳಿಗೆ ಗ್ರಾಮೀಣ ಭತ್ಯೆಯನ್ನು ನೀಡದೇ ಇದ್ದಲ್ಲಿ ಈ ಭತ್ಯೆಯನ್ನು ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ;

(ಉ) ಹಾಗಿದ್ದಲ್ಲಿ, ಎಷ್ಟು ಗ್ರಾಮೀಣ ಸೇವಾ ಭತ್ಯೆಯನ್ನು ನೀಡಲಾಗುವುದು;

(ಊ) ಸರ್ಕಾರಿ ಆದೇಶ ಸಂಖ್ಯೆ: ಆಕುಕ 718 ಹೆಚ್.ಎಸ್.ಹೆಚ್. 2008, ದಿನಾಂಕ: 10–12–2009 ಪ್ರಕಾರ ಈ ಸೌಲಭ್ಯವನ್ನು ಆಯುಷ್ ವೈದ್ಯರಿಗೂ ಸರ್ಕಾರವು ಜಾರಿಗೊಳಿಸುವುದೇ;

(ಎ) ಹಾಗಿದ್ದಲ್ಲಿ, ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

(ಅ) ಮಾಸಿಕ ರೂ. 7000/–

(ಆ) ಗ್ರಾಮೀಣ ಭತ್ಯೆ ನೀಡುತ್ತಿಲ್ಲ.

(ಇ) ಆಯುಷ್ ವೈದ್ಯರಿಗೆ ಗ್ರಾಮೀಣ ಭತ್ಯೆಯನ್ನು ನೀಡುವ ಬಗ್ಗೆ ವೇತನ ಸಮಿತಿ ಮುಂದೆ ಆಯುಷ್ ನಿರ್ದೇಶಕರು ದಿನಾಂಕ: 15–10–2011 ರಂದು ಪ್ರಸ್ತಾವನೆ ಮಂಡಿಸಿದ್ದು, ಸದರಿ ಪ್ರಸ್ತಾವನೆ ಸಮಿತಿಯ ಪರಿಶೀಲನೆಯಲ್ಲಿದೆ.

(ಈ) ವೇತನ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ ನಿರ್ಧರಿಸಬೇಕಾಗುತ್ತದೆ.

(ಉ) ಮೇಲಿನಂತಿರುತ್ತದೆ.

(ಊ) ಮೇಲಿನಂತಿರುತ್ತದೆ.

(ಎ) ಮೇಲಿನಂತಿರುತ್ತದೆ.